ಅಧ್ಯಕ್ಷರು : ಎಲ್ಲಾ ಅಧಿಕಾರಿಗಳಿಗೆ ಸುತ್ತೋಲೆ ಕಳುಹಿಸಿ ಎಲ್ಲಾ ಸಂಸ್ಥೆಗಳಲ್ಲಿ ಮೀಸಲಾತಿ ನಿಯಮ ಪಾಲನೆ ಮಾಡಿದ್ದಾರೆಯೇ ಎಂಬ ಬಗ್ಗೆ ಮಾಹಿತಿ ತರಿಸಿಕೊಡಿ : ನಾವು ನೋಡುತ್ತೇವೆ.

ಶ್ರೀ ಹೆಚ್. ಡಿ. ಬಸವರಾಜು : ನಾನು ಒಂದು ಸಲಹೆ ಕೊಡುವುದಕ್ಕೆ ಇಷ್ಟ ಪಡುತ್ತೇನೆ. ಕಾನ್ವೆಂಟ್ ಶಾಲೆಗಳು ಯಾವುದೇ ಆಗಲಿ, ಅನುದಾನರಹಿತ ಅಥವಾ ಅನುದಾನ ಪಡೆದುಕೊಳ್ಳುತ್ತಿರುವ ಶಾಲೆಗಳು ಯಾವುದೇ ಆಗಲಿ, ಅನುದಾನರಹಿತ ಅಥವಾ ಅನುದಾನ ಪಡೆದುಕೊಳ್ಳುತ್ತಿರುವ ಶಾಲೆಗಳು ಎಷ್ಟು ಮಿಸಲಾತಿ ಕೊಡುತ್ತಾರೆಂಬುದನ್ನು ನೋಟೀಸ್ ಬೋರ್ಡಿನಲ್ಲಿ ಹಾಕುವ ವ್ಯವಸ್ಥೆ ಮಾಡಬೇಕಾಗಿದೆ. ಏಕೆಂದರೆ ಇವರು ಅರ್ಜಿ ನಮೂನೆ ಕೊಡದೆ ಇರುವ ವ್ಯವಸ್ಥೆ ಬಹಳಷ್ಟು ವರ್ಷಗಳಿಂದ ಅನೂಚಾನವಾಗಿ ನಡೆದುಕೊಂಡು ಬಂದಿದೆ.

ಅಧ್ಯಕ್ಷರು : ಬೆಂಗಳೂರಿನಲ್ಲಿರುವ ಕಾನ್ವೆಂಟ್ ಶಾಲೆಯಲ್ಲಿರುವ ರಿಸರ್ವೇಷನ್ ಯಾರಿಗೆ ರಿಸರ್ವೇಷನ್ ಅಗತ್ಯವಿಲ್ಲ ಅವರೇ ತೆಗೆದುಕೊಂಡು ಅಡ್ಜಸ್ಟ್ ಮಾಡಿಕೊಂಡಿರುತ್ತಾರೆ. ರಿಸರ್ವೇಷನ್ ನಮ್ಮ ಮತ್ತು ನಿಮ್ಮ ಊರಿನ ಬಗ್ಗೆ ಯೋಚನೆ ಮಾಡೋಣ ಬೆಂಗಳೂರಿನವರಿಗೆ ಏತಕ್ಕೆ ರಿಸರ್ವೇಷನ್ ?

ಶ್ರೀ ಹೆಚ್. ಡಿ. ಬಸವರಾಜು : ಬೆಂಗಳೂರು ಬೇಡ ವಿರಾಜಪೇಟೆಗೆ ಬಂದರೆ ಅಲ್ಲಿ ಬಡವರು ಇದ್ದಾರೆ.

ಅಧ್ಯಕ್ಷರು : ಈಗ ಅವರದ್ದು ಮಾತನಾಡೋಣ ಅವರು ಮಾಹಿತಿ ತರಿಸಿಕೊಳ್ಳಲಿ.

ಶ್ರೀ ಹೆಚ್. ಡಿ. ಬಸವರಾಜು : ಇದನ್ನು ಕಡ್ಡಾಯ ಮಾಡಲಿ ಎಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ. ಏಕೆಂದರೆ ಮೀಸಲಾತಿಯನ್ನು ಪ್ರಕಟ ಮಾಡಿದರೆ ಅದರಿಂದ ಸಾರ್ವಜನಿಕರಿಗೂ ಗೊತ್ತಾಗುತ್ತದೆ.

ಅಧ್ಯಕ್ಷರು : ಹೇಳಿದ್ದೀರಲ್ಲಾ ಬಿಡಿ. ಮಂತ್ರಿಗಳು ಮಾಹಿತಿ ತರಿಸಿಕೊಳ್ಳಲಿ.

ವಿಷಯ : ಬೀಳಗಿ ಮತಕ್ಷೇತ್ರದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಮಂಜೂರು

139 (1015)-ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) 1996-97ನೇ ಸಾಲಿನಲ್ಲಿ ಎಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸಿರುವಿರಿ ಎಂಬುದನ್ನು ಜಿಲ್ಲಾವಾರು ಮಾಹಿತಿ ಒದಗಿಸುವಿರಾ ?

ಅ) ಇನ್ನೂವರೆಗೂ ಯಾವುದೇ ಕೇಂದ್ರಗಳನ್ನು ಪ್ರಾರಂಭಿಸಲು ತೀರ್ಮಾನ ತೆಗೆದುಕೊಂಡಿರದಿದ್ದಲ್ಲಿ ಯಾವಾಗ ತೀರ್ಮಾನ ತೆಗೆದುಕೊಳ್ಳುವಿರಿ?

ಇ) ಬೀಳಗಿ ಮತಕ್ಷೇತ್ರ ಜಮಖಂಡಿ ತಾಲ್ಲೂಕಿನ ಗೋರೆ ಹಾಗೂ ತೊದಲಬಾಗಿಯಲ್ಲಿ ಹಲವಾರು ವರ್ಷಗಳಿಂದ ಆರೋಗ್ಯ ಕೇಂದ್ರಗಳ ಬೇಡಿಕೆ ಇದ್ದು ಈ ಸಾಲಿನಲ್ಲಾದರೂ ಮಂಜೂರು ಕೊಡುವಿರಾ? ವಿಶೇಷವಾಗಿ ಗೋರೆಯಲ್ಲಂತೂ ಆದರೆ ಅವಶ್ಯಕತೆ ಇದ್ದು ಆದ್ಯತೆಯ ಮೇರೆಗೆ ಇದರ ಮಂಜೂರು ಕೊಡುವಿರಾ?

ಈ) ಪ್ರಾಥಮಿಕ ಆರೋಗ್ಯ ಕೇಂದ್ರವಾದ ಸಾವಳಗಿಯಲ್ಲಿ ಡಾಕ್ಟರುಗಳು ಇರದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಇದಕ್ಕೆ ಕಳೆದ ಎರಡು ವರ್ಷದಿಂದ ಪ್ರಯತ್ನ ಮಾಡುತ್ತಾ ಇದ್ದರೂ ಯಾವುದೇ ಖಾಯಂ ಡಾಕ್ಟರುಗಳನ್ನು ಹಾಕದೇ ಇರುವುದಕ್ಕೆ ವಿವರಣೆ ಕೊಡಿರಿ?

ಡಾ।। ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.)

ಅ) 1996-97ನೇ ಸಾಲಿನಲ್ಲಿ 50 ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡುವ ಗುರಿ ನಿಗದಿಪಡಿಸಿದ್ದು ಸ್ಥಳಗಳ ಬಗ್ಗೆ ಅಂತಿಮ ತೀರ್ಮಾನ ಪರಿಶೀಲನೆಯ ಹಂತದಲ್ಲಿದೆ.

ಆ) ಈ ತಿಂಗಳ ಅಂತ್ಯದೊಳಗೆ ತೀರ್ಮಾನವನ್ನು ತೆಗೆದುಕೊಳ್ಳಲಾಗುವುದು.

ಇ) 1996-97ನೇ ಸಾಲಿಗೆ ಜಿಲ್ಲಾ ಪಂಚಾಯತ್‌ನಿಂದ ಪ್ರಸ್ತಾವನೆ ಬಂದಿರುವುದಿಲ್ಲ. ಇದು ಸರ್ಕಾರದ ಪರಿಶೀಲನೆಯಲ್ಲಿದೆ.

ಈ) ಸಾವಳಗಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಡಾ।। ಉಳ್ಳಾಗಡ್ಡಿ ಎಂಬ ಖಾಯಂ ವೈದ್ಯರು ಕೆಲಸ ನಿರ್ವಹಿಸುತ್ತಿದ್ದಾರೆ. ಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿದ್ದ ಡಾ. ಬಿದರಕರ್ ಎಂಬುವವರು ಕಳೆದ 5 ತಿಂಗಳಿನಿಂದ ಗೈರುಹಾಜರಾಗಿರುತ್ತಾರೆ.

ಶ್ರೀ ಜೆ. ಟಿ. ಪಾಟೀಲ್ : ಕಳೆದ 5 ವರ್ಷಗಳಿಂದ ನನ್ನ ಮತಕ್ಷೇತ್ರದ ಜಮಖಂಡಿ ತಾಲ್ಲೂಕಿನ ಗೋಡೆ ಮತ್ತು ತೊದಲಬಾಗಿಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ಸಲುವಾಗಿ ಜಿಲ್ಲಾ ಪಂಚಾಯಿತಿ ಮುಖಾಂತರ ಪ್ರಸ್ತಾವನೆ ಬರುತ್ತಿದೆ. 1996-97ನೇ ಸಾಲಿನಲ್ಲಿ ಪ್ರಸಾವನೆ ಕಳುಹಿಸಿಲ್ಲವೆಂದು ಮಾನ್ಯ ಮಂತ್ರಿಗಳು ಉತ್ತರ ಹೇಳಿದ್ದಾರೆ. ಈಗಲಾದರೂ ಜಿಲ್ಲಾ ಪಂಚಾಯಿತಿಯ ಮುಖಾಂತರ ಆ ಪ್ರಸ್ತಾವನೆಯನ್ನು ತರಿಸಿಕೊಳ್ಳುವ ವ್ಯವಸ್ಥೆ ಮಾಡಬೇಕೆಂದು ನಾನು ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ದಯಮಾಡಿ ಈ

ಸಾಲಿನಲ್ಲಾದರೂ ಗೋಡೆ ಮತ್ತು ತೊದಲಬಾಗಿಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಕೊಡುತ್ತೀರಾ ? ಎರಡನೆಯದಾಗಿ, ನಾನು ಶಾಸಕನಾದ ಬಳಿಕ ಸಾವಳಗಿ ಆರೋಗ್ಯ ಕೇಂದ್ರದಲ್ಲಿ ವೈದ್ಯರಿಲ್ಲ. ಅಲ್ಲಿ ಖಾಯಂ ವೈದ್ಯರು ಇಲ್ಲದಿರುವುದರಿಂದ ಡಾ. ಉಳ್ಳಾಗಡ್ಡಿ ಎಂಬುವವರನ್ನು ಗುತ್ತಿಗೆ ಆಧಾರದ ಮೇಲೆ ತೆಗೆದು ಕೊಂಡಿದ್ದೇವೆಂದು ತಾವು ಹೇಳಿದಿರಿ. ಅವರು ತಿಂಗಳಿಗೆ ಒಂದು ದಿನ ಒಂದು ಪಗಾರ ತೆಗೆದುಕೊಂಡು ಹೋಗುತ್ತಾರೆ. ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಇರುವುದಿಲ್ಲ. ಏಪ್ರಿಲ್‌ನಲ್ಲಾದರೂ ತಾವು ಅಲ್ಲಿಗೆ ಖಾಯಂ ವೈದ್ಯರನ್ನು ಹಾಕುತ್ತೀರಾ ಹೇಗೆ?

ಶ್ರೀ ಹೆಚ್. ಸಿ. ಮಹಾದೇವಪ್ಪ : ಮಾನ್ಯ ಸದಸ್ಯರು ಈ ಪ್ರಶ್ನೆಯನ್ನು ಹೋದವರ್ಷ ಕೇಳಿದ್ದರು. ಈ ಬಗ್ಗೆ ಜಿಲ್ಲಾ ಪರಿಷತ್ತಿನಿಂದ ವರದಿ ಕೇಳಿ 1996-97ನೇ ಸಾಲಿನಲ್ಲಿ ಅರ್ಹತೆ ಮತ್ತು ಅವಶ್ಯಕತೆಯನ್ನು ಅನುಸರಿಸಿ ಕ್ರಮ ಕೈಗೊಳ್ಳುತ್ತೇನೆಂದು ತಿಳಿಸುವುದಕ್ಕೆ ಬಯಸುತ್ತೇನೆ. ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಇಬ್ಬರು ವೈದ್ಯರಿದ್ದು ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡತಕ್ಕ ಡಾ. ಬಿದರಕರ್ ಅವರು ಕಳೆದ 5 ತಿಂಗಳುಗಳಿಂದ ಗೈರು ಹಾಜರಾಗಿದ್ದಾರೆ. ಇನ್ನೊಬ್ಬರು ಖಾಯಂ ಆಗಿ ಕೆಲಸ ಮಾಡುತ್ತಿದ್ದಾರೆ. ಗೈರು ಹಾಜರಾಗಿರುವವರು ಬಾರದಿದ್ದರೆ ಅವರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳುತ್ತೇವೆ.

ಅಧ್ಯಕ್ಷರು : ಕೆಲಸ ಮಾಡಿಕೊಡುತ್ತೇವೆಂದು ಹೇಳಿದ್ದಾರೆ.

ಶ್ರೀ ಜೆ. ಟಿ. ಪಾಟೀಲ್ : 1995ರ ಫೆಬ್ರುವರಿಯಲ್ಲಿ ಮತ್ತು 1997ರ ಮಾರ್ಚ್‌ನಲ್ಲಿ ಇದೇ ಪ್ರಶ್ನೆ ಕೇಳಿದ್ದೇನೆ. ಈ ಬಗ್ಗೆ ಖಚಿತವಾದ ಭರವಸೆ ಕೊಡಬೇಕು.

ಅಧ್ಯಕ್ಷರು : ಸರ್ಕಾರ ಮಾಡಿಕೊಡುತ್ತೀವೆಂದು ಹೇಳುವುದಾದರೂ ಪರಿಶೀಲಿಸುತ್ತೇವೆಂದು ಹೇಳುವುದು. ಅವರು ಮನೆಯ ಯಜಮಾನರು ಇದ್ದಹಾಗೆ, ಪರಿಶೀಲಿಸುತ್ತಾರೆ. ಬಿಡಿ.

ವಿಷಯ : ಸುರತ್ಕಲ್ ಕ್ಷೇತ್ರದ ಅರಣ್ಯಭೂಮಿ ಒತ್ತುವರಿ.

141 (1242)-ಶ್ರೀ ಕುಂಬ್ಳೆ ಸುಂದರ್‌ರಾವ್ (ಸುರತ್ಕಲ್) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆರಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಸುರತ್ಕಲ್ ಕ್ಷೇತ್ರದ ಬಡಗ (ಸರ್ವೆ ನಂ.124) ಎಕ್ಕಾರು ಗ್ರಾಮದಲ್ಲಿ ಇರುವ ಅರಣ್ಯ ಭೂಮಿ ಎಷ್ಟು?

ಆ) ಸದರಿ ಜಮೀನನ್ನು ಆಕ್ರಮವಾಗಿ ಎಷ್ಟು ಕಡೆ ಒತ್ತುವರಿ ಮಾಡಲಾಗಿದೆ.